ಪಾಠ 3

# ನಮ್ಮ ಸ್ವರ್ಗದ ತಂದೆಗೆ ಕಿವಿಕೊಡುವಿರಿ



**ಈ ಪಾಠದಲ್ಲಿ ನೀವು ಕಲಿಯುವ ಅಂಶಗಳು:**

ದೇವರು ನಿಮ್ಮೊಂದಿಗೆ ಮಾತಾಡಬೇಕೆಂದಿದ್ದಾನೆ
ದೇವರು ಅನೇಕ ವಿಧಗಳಲ್ಲಿ ಮಾತನಾಡುತ್ತಾನೆ
ದೇವರು ಪುಸ್ತಕವನ್ನು ಬರೆದದ್ದು ಹೇಗೆ
ಸತ್ಯವೇದ ಸಂಬಂಧ ಸೂಚನೆಗಳು
ದೇವರ ಸ್ವರವನ್ನು ಕೇಳುವುದು ಹೇಗೆ

## ದೇವರು ನಿಮ್ಮೊಂದಿಗೆ ಮಾತಾಡಬೇಕೆಂದಿದ್ದಾನೆ

ಯಾವ ತಂದೆಯು ತನ್ನ ಮಕ್ಕಳೊಂದಿಗೆ ಮಾತಾಡುವಲ್ಲಿ ಸಂತೋಷಿಸದಿರಲಾರನು, ಒಂದು ವೇಳೆ ಅವು ಚಿಕ್ಕ ಮಗುವಾಗಿದ್ದು ಉತ್ತರ ರೂಪವಾಗಿ ಮುಗಳು ನಕ್ಕರೂ ಸಾಕಲ್ಲವೇ? ನಮ್ಮ ಸ್ವರ್ಗದ ತಂದೆಯು ಸಹ ತನ್ನ ಮಕ್ಕಳೊಂದಿಗೆ ಮಾತನಾಡಲು ಇಚ್ಛಿಸುತ್ತಾನೆ. ಅವರಿಗೆ ತನ್ನ ಪ್ರೀತಿಯನ್ನು ತೋರಿಸುತ್ತಾನೆ, ಬೋಧಿಸುತ್ತಾನೆ ಮತ್ತು ಅವರ ಸಮಸ್ಯೆಗಳಲ್ಲಿ ಸಹಾಯ ಮಾಡುತ್ತಾನೆ. ನಿನಗೆ ಆತನ ಸ್ವರ ಕೇಳಲು ಇಷ್ಟ ಉಂಟೋ?

**ನೀವು ಮಾಡಬೇಕಾದದ್ದು**

1. ದೇವರು

...ಅ) ತನ್ನ ಮಕ್ಕಳೊಂಗೆ ಮಾತನಾಡಲು ಇಷ್ಟಪಡುತ್ತಾನೆ

...ಆ) ನಮ್ಮೊಂದಿಗೆ ಮಾತನಾಡಲು ಆತನು ಅತೀ ಪರಿಶುದ್ಧನಾಗಿದ್ದಾನೆ

...ಇ) ಈಗ ಜನರೊಂದಿಗೆ ಮಾತನಾಡುವುದಿಲ್ಲ

**ಉತ್ತರ** : 1ಅ) ತನ್ನ ಮಕ್ಕಳೊಂದಿಗೆ ಮಾತನಾಡಲು ಇಷ್ಟಪಡುತ್ತಾನೆ

---

## ದೇವರು ಅನೇಕ ವಿಧಗಳಲ್ಲಿ ಮಾತನಾಡುತ್ತಾನೆ

---

ಇಬ್ರಿಯರಿಗೆ 1:1,2 "ಪುರಾತನಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗಭಾಗಯೂ ವಿಧವಿಧವಾಗಿಯೂ ಮಾತಾಡಿದ ದೇವರು ಈ ಅಂತ್ಯದಿನಗಳಲ್ಲಿ ನಮ್ಮ ಸಂಗಡ ಮಗನ ಮುಖಾಂತರ ಮಾತಾಡಿದ್ದಾನೆ. ಈತನನ್ನು ಎಲ್ಲಕ್ಕೂ ಬಾಧ್ಯನನ್ನಾಗಿ ನೇಮಿಸಿದನು.

ದೇವರು ನಿಮ್ಮೊಂದಿಗೆ ಮಾತನಾಡುವ ಕೆಲವು ವಿಧಾನಗಳು

### ನೇರವಾಗಿ ನಿಮ್ಮ ಆತ್ಮದೊಂದಿಗೆ

ಪರಿಶುದ್ಧಾತ್ಮನು ನಿಮಗೆ ಯೇಸುವಿನ ಪ್ರಸನ್ನತೆಯನ್ನು ನಿಜಗೊಳಿಸುತ್ತಾನೆ. ಆತನು ನಿಮ್ಮ ಮನಸ್ಸಾಕ್ಷಿಯ ಮೂಲಕ ಮಾತನಾಡಬಹುದು, ನೀವು ಮಾಡಬೇಕಾದುದ್ದರ ಬಗ್ಗೆ ಅನಿಸುವಿಕೆ ಕೊಟ್ಟು ಮಾಡದಿರುವುದರ ಬಗ್ಗೆ ಎಚ್ಚರಿಕೆಯನ್ನು ಕೊಡುತ್ತಾನೆ. ಆತನು ನಿಮಗೆ ಆತ್ಮೀಕ ಸತ್ಯವನ್ನು ಸ್ಪಷ್ಟಗೊಳಿಸಬಹುದು. ಅಥವಾ ದೇವರು ತಾನು ಇಚ್ಛಿಸುವ ಯಾವುದೋ ಸಂಗತಿಯ ಕುರಿತು ನಿಮ್ಮಲ್ಲಿ ಆಳವಾದ ಪರಿಣಾಮವನ್ನು ಬೀರುವನು. ನೀವು ಪ್ರಾರ್ಥಿಸುವಾಗ ದೇವರು ನಿಮ್ಮೊಂದಿಗೆ ಮಾತನಾಡಲು ಕೇಳಿರಿ ಮತ್ತು ನಿಮ್ಮ ಹೃದಯದಲ್ಲಿ ಆತನ ಸ್ವರ ಕೇಳುವಂತೆ ನಿರೀಕ್ಷಿಸಿರಿ.

**ನೀವು ಮಾಡಬೇಕಾದದ್ದು**

2. ದೇವರು ನಿಮ್ಮ ಆತ್ಮದೊಂದಿಗೆ ನೇರವಾಗಿ ಹೇಗೆ ಮಾತಾಡುತ್ತಾನೆ (ಎರಡು ಉತ್ತರಗಳನ್ನು ಬರೆಯಿರಿ)

   ...ಅ) ನೀವು ಯಾವಾಗಲೂ ಬೇರೆಯವರ ಹಾಗೆ ಒಂದು ಪ್ರತ್ಯೇಕವಾದ ಸ್ವರವನ್ನು ಕೇಳುವಿರಿ

   ...ಆ) ನೀವು ಯಾವುದೋ ಸಂಗತಿಯನ್ನು ಮಾಡಲು ಪ್ರಭಾವಗೊಳ್ಳುತ್ತೀರಿ

...ಇ) ಕನಸಿನ ಇಲ್ಲವೆ ದರ್ಶನದ ಮುಖಾಂತರ

...ಈ)ಒಂದು ಆತ್ಮೀಕ ಸತ್ಯವು ತಕ್ಷಣವಾಗಿ ನಿಮಗೆ ಸ್ಪಷ್ಟವಾಗಿ ಮತ್ತು ಸತ್ಯವಾಗಿ ತೋರಬಹುದು.

**ಉತ್ತರಗಳು** : 2ಅ) ನೀವು ಯಾವುದೋ ಸಂಗತಿಯನ್ನು ಮಾಡಲು ಪ್ರಭಾವಗೊಳ್ಳುತ್ತೀರಿ ಈ) ಒಂದು ಆತ್ಮೀಕ ಸತ್ಯವು ತಕ್ಷಣವಾಗಿ ನಿಮಗೆ ಸ್ಪಷ್ಟವಾಗಿ ತೋರಬಹುದು.

**ಆತನ ಆಶೀರ್ವಾದಗಳ ಮೂಲಕ**

ಅನೇಕ ಶಿಷ್ಯರು ಹೇಳುವುದೇನೆಂದರೆ ತಾವು ಹೊಸದಾಗಿ ಹುಟ್ಟಿದ ಮೇಲೆ ಇಡೀ ಲೋಕವು ಅವರಿಗೆ ಬೇರೆಯಾಗಿ ಕಾಣುತ್ತದೆ ಎಂದು. ನೀವು ಸಹ ನಿಮ್ಮ ಸುತ್ತಲೂ ನೋಡುತ್ತಾ ದೇವರ ಆಶೀರ್ವಾದಗಳಿಗಾಗಿ ಒಂದು ಹೊಸ ಮೆಚ್ಚುಗೆಯನ್ನು ವ್ಯಕ್ತಮಾಡಿರಿ. ನೀವು ಈ ಆಶ್ಚರ್ಯಕರವಾದ ಸೃಷ್ಟಿಯಲ್ಲಿ ಆತನ ಪ್ರಸನ್ನತೆಯನ್ನು ಅನುಭವಿಸಿರಿ. ಆತನು ನಿಮ್ಮೊಂದಿಗೆ ಸಂಗೀತ ಮತ್ತು ಕಲೆಯಿಂದ ಮಾತನಾಡುತ್ತಾನೆ. ನೀವು ಇತರ ಶಿಷ್ಯರ ಬಾಂಧವ್ಯದಲ್ಲಿ ಆತನ ಪ್ರಸನ್ನತೆಯನ್ನು ಹತ್ತಿರದಲ್ಲಿಯೇ ಅನುಭವಿಸುವಿರಿ. ನಿಮ್ಮ ಸುತ್ತಲೂ ಇರುವ ಒಂದು ಸಾವಿರ ಆಶೀರ್ವಾದಗಳನ್ನು ದೇವರ ಒಳ್ಳೇತನವನ್ನು ನಿಮಗೆ ತಿಳಿಸುತ್ತವೆ. ನಿಮ್ಮ ಪ್ರಾರ್ಥನೆಗಳಿಗೆ ಉತ್ತರಕೊಡುವ ಮುಖಾಂತರ ಆತನು ಮಾತಾಡುತ್ತಾನೆ. ನಂಬಿಕೆಯ ಕಣ್ಣುಗಳು ದೇವರ ನಗೆಯನ್ನು ನೋಡುವವು ಮತ್ತು ಆತ್ಮೀಕ ಕಿವಿಗಳು, "ನನ್ನ ಮಗುವೇ, ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂಬ ಆತನ ಮಾತುಗಳು ಕೇಳುವವು.

**ನೀವು ಮಾಡಬೇಕಾದದ್ದು**

3. ಯಾವಾಗಲಾದರೂ ದೇವರು ನಿಮ್ಮೊಂದಿಗೆ ಮಾತಾಡಿದ್ದಾನೋ ..................... ಯಾವಾಗ?.....................

4. ದೇವರು ನಿಮ್ಮನ್ನು ಪ್ರೀತಿಸುತ್ತಾನೆಂದು ನೀವು ಕಾಣುವ ದೇವರ ಕೆಲವು ಆಶೀರ್ವಾದಗಳನ್ನು ಬರೆಯಿರಿ..................................

..........................................................................

**ಇನ್ನಿತರ ಶಿಷ್ಯರ ಮೂಲಕವಾಗಿ**

ಕುಟುಂಬದಲ್ಲಿ ಕೆಲವು ಸಾರಿ ಹಿರಿಯ ಮಕ್ಕಳು ಚಿಕ್ಕವರಿಗೆ "ಬೇಡ ಬೇಡ, ಇದು ತಂದೆಯವರಿಗೆ ಇಷ್ಟವಿಲ್ಲ" ಅಥವಾ "ನೋಡು, ಇದುವೇ ತಂದೆಯವರಿಗೆ ಬೇಕಾದದ್ದು" ಎನ್ನುತ್ತಾರೆ.

ದೇವರು ಸಹ ಕರ್ತನಲ್ಲಿರುವ ಹಿರಿಯ ಸಹೋದರರ ಮತ್ತು ಸಹೋದರಿಯರ ಮುಖಾಂತರ ತನ್ನ ಮಕ್ಕಳೊಂದಿಗೆ ಮಾತಾಡುತ್ತಾನೆ. ನಾವು ಇತರ ಶಿಷ್ಯರನ್ನು ಭೇಟಿಯಾಗಬೇಕೆಂದು ಆತನು ಬಯಸುತ್ತಾನೆ. ಕಾರಣ ಅವರಿಂದ ಪ್ರೋತ್ಸಾಹ, ಮಾರ್ಗದರ್ಶನ ಮತ್ತು ಸಹಾಯ ನಮಗೆ ಸಿಕ್ಕಲು ಅವರನ್ನು ಉಪಯೋಗಿಸುತ್ತಾನೆ.

ಎಫೆಸದವರಿಗೆ 5:21 ಕ್ರಿಸ್ತನಿಗೆ ಭಯಪಡುವವರಾಗಿದ್ದು ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ.

**ನೀವು ಮಾಡಬೇಕಾದದ್ದು**

5. ನಿಮಗೆ ಎಂದಾದರೂ ಇತರ ಶಿಷ್ಯರು, ದೇವರು ನೀವು ಮಾಡಲು ಇಚ್ಛಿಸಿದನ್ನು ತಿಳಿಸಲು ಸಹಾಯ ಮಾಡಿದ್ದಾರೋ......
6. ನಿಮಗೆ ಯಾರಾದರೂ ಉತ್ತಮ ಶಿಷ್ಯರಾಗಲು ಪ್ರೋತ್ಸಾಹಿಸಿ ದ್ದಾರೋ?...................... ಯಾರು?...........................
7. ತನ್ನ ಮಕ್ಕಳ ಮುಖಾಂತರ ದೇವರು ಮಾತನಾಡುವುದಕ್ಕಾಗಿ ಆತನನ್ನು ಸ್ತುತಿಸಿರಿ ಇತರರು ನಿಮ್ಮ ಮುಖಾಂತರ ರಕ್ಷಣೆಯನ್ನು ಕಂಡುಕೊಳ್ಳುವಂತೆ ಸಹಾಯ ಮಾಡಲು ಅಥವಾ ಇತರರು ಕರ್ತನನ್ನು ಹಿಂಬಾಲಿಸಲು ಪ್ರೋತ್ಸಾಹಿಸುವಂತೆ ಮಾಡಲು ಆತನನ್ನು ಬೇಡಿಕೊಳ್ಳಿರಿ.

**ಆತ್ಮೀಕ ವರಗಳ ಮತ್ತು ಸೇವೆಗಳ ಮುಖಾಂತರ**

ಪವಿತ್ರಾತ್ಮನು ಸಭೆಯಲ್ಲಿ ಅನೇಕ ತರಹದ ಆತ್ಮೀಕ ವರಗಳನ್ನಿಟ್ಟಿದ್ದಾನೆ. ಆತನು ಅವುಗಳ ಮುಖಾಂತರ ಮಾತನಾಡುತ್ತಾನೆ. ಆತನು ದೇವರ ಸಂದೇಶವನ್ನು ಸಭೆಯಲ್ಲಿರುವ ಬೋಧಕರಿಗೆ, ಉಪದೇಶಕರಿಗೆ ಸುವಾರ್ತಿಕರಿಗೆ ಮತ್ತು ಲೇಖಕರಿಗೆ ಕೊಡುತ್ತಾನೆ ಆತನು ಪ್ರತಿಯೊಬ್ಬ ಶಿಷ್ಯನನ್ನು ದೇವರ ಕುರಿತಾಗಿ ಇತರರಿಗೆ ತಿಳಿಸುವುದಕ್ಕಾಗಿ ಉಪಯೋಗಿಸಲು ಇಚ್ಛಿಸುತ್ತಾನೆ. ನೀವು ಸಭೆಯ ಕೂಟಗಳಿಗೆ

ಪದೇ ಪದೇ ಹೋಗುವುದು ಮುಖ್ಯವಾಗಿದೆ. ನೀವು ಪ್ರತಿಸಾರಿ ಹೋಗುವಾಗ ಸ್ವರ್ಗದ ತಂದೆಯು ನಿಮಗೆ ಹೇಳುವುದನ್ನು ಕೇಳಿರಿ.

> ಮತ್ತಾಯ 18:20 "ಯಾಕೆಂದರೆ ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲಿ ಕೂಡಿ ಬಂದಿರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ ಅಂದನು."

### ನೀವು ಮಾಡಬೇಕಾದದ್ದು

8. (ಎರಡು ಉತ್ತರಗಳನ್ನು ಬರೆಯಿರಿ) ದೇವರು ಕೆಲವು ಜನರ ಮುಖಾಂತರ ಕೆಲವು ಸಾರಿ ಮಾತನಾಡುತ್ತಾನೆ
   ...ಅ) ಬೋಧಕರುಗಳ ಇಲ್ಲವೆ ಸುವಾರ್ತಿಕರ ಪ್ರಸಂಗಗಳ ಮುಖಾಂತರ
   ...ಆ) ಆತ್ಮಗಳ ಮಾಧ್ಯಮದಿಂದ
   ...ಇ) ಮಾಟ ಮಂತ್ರದಿಂದ
   ...ಈ)ಶಿಷ್ಯರು ಬರೆದ ಕರಪತ್ರ ಮತ್ತು ಪುಸ್ತಕಗಳ ಮೂಲಕ
9. ನೀವು ಸಭೆಯಲ್ಲಿರುವಾಗ, ದೇವರು ನಿಮ್ಮೊಂದಿಗೆ ಮಾತಾಡಲು ನಿರೀಕ್ಷಿಸುತ್ತೀರೋ?..........................................................
10. ದೇವರು ಈ ಪುಸ್ತಕದ ಮುಖಾಂತರ ನಿಮ್ಮೊಂದಿಗೆ ಮಾತಾಡಿದ್ದಾನೋ?..........................................................
11. ದೇವರು ನಿಮ್ಮೊಂದಿಗೆ ಪ್ರತಿಪಾಠದಲ್ಲಿ ಮಾತಾಡುವಂತೆ ಬೇಡಿಕೊಳ್ಳಿರಿ........

ಉತ್ತರಗಳು: 8ಅ) ಬೋಧಕರುಗಳ ಇಲ್ಲವೆ ಸುವಾರ್ತಿಕರ ಪ್ರಸಂಗಗಳ ಮುಖಾಂತರ ಈ) ಶಿಷ್ಯರು ಬರೆದ ಕರಪತ್ರ ಮತ್ತು ಪುಸ್ತಕಗಳ ಮೂಲಕ

**ಸಂಗೀತಗಳ ಮೂಲಕವಾಗಿ**

ದೇವರು ಅನೇಕ ಸಾರಿ ಸುವಾರ್ತ ಸಂಗೀತ ಅಥವಾ ಪಲ್ಲವಿಗಳ ಶಬ್ದಗಳ ಮೂಲಕವಾಗಿ ನಿಮ್ಮೊಂದಿಗೆ ಮಾತನಾಡುತ್ತಾನೆ. ಆತನು ಅನೇಕ ಸಾರಿ ಕೆಲವು ಸಂಗೀತಗಳ ಶಬ್ದಗಳನ್ನು ನಿಮ್ಮ ನೆನಪಿಗೆ ತಂದು ಅವುಗಳಲ್ಲಿನ ಸಂದೇಶಗಳನ್ನು ನಿಮಗೆ ಕೊಡುವ ಮುಖಾಂತರ ನಿಮ್ಮಲ್ಲಿ ಆಶ್ಚರ್ಯವನ್ನು ಉಂಟು ಮಾಡುವನು.

ಎಫೆಸದವರಿಗೆ 5:19 ಆದರೆ ಪವಿತ್ರಾತ್ಮಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡಿರಿ.

### ನೀವು ಮಾಡಬೇಕಾದದ್ದು

12. ಸಭೆಯಲ್ಲಿ ಹಾಡುವ ಸಂಗೀತಗಳನ್ನು ಮತ್ತು ಪಲ್ಲವಿಗಳನ್ನು ನೀವು ಬೇಗನೆ ಕಲಿತುಕೊಳ್ಳಲು ಸಹಾಯ ಮಾಡುವಂತೆ ಕರ್ತನನ್ನು ಬೇಡಿಕೊಳ್ಳಿರಿ. ಅವುಗಳನ್ನು ನಿಮಗೆ ಸಾಧ್ಯವಾಗುವ ಮಟ್ಟಿಗೆ ಮನೆಗಳಲ್ಲಿ ಹಾಡಿರಿ.
13. ನೀವು ಹಾಡುವುದೇನೆಂಬುದನ್ನು ಯೋಚಿಸುವ ಅಭ್ಯಾಸ ಮಾಡಿರಿ ಹಾಡಿನ ಅರ್ಥವು ನಿಮ್ಮಲ್ಲಿರಲಿ. ಸಂಗೀತದಲ್ಲಿನ ಪದಗಳನ್ನು ನಿಮ್ಮ ಜೀವಿತಕ್ಕೆ ಅಳವಡಿಸಿಕೊಳ್ಳಲು ಸಹಾಯ ನೀಡುವಂತೆ ದೇವರಲ್ಲಿ ಪ್ರಾರ್ಥಿಸಿರಿ.

### ಸತ್ಯವೇದದ ಮೂಲಕವಾಗಿ

ದೇವರು ನಿಮ್ಮೊಂದಿಗೆ ತನ್ನ ಪುಸ್ತಕವಾದ ಸತ್ಯವೇದದ ಮೂಲಕ ಮಾತಾಡುತ್ತಾನೆ. ಆತನ ಸಂದೇಶವನ್ನು ತಿಳಿದುಕೊಳ್ಳುವ ನಿಜ ಮಾರ್ಗವಾಗಿದೆ. ನಿಮ್ಮ ಕುರಿತು ದೇವರ ಚಿತ್ತವೇನೆಂಬುದುನ್ನು ಬೋಧಕರು ನಿಮಗೆ ಯಾವಾಗಲೂ ತಿಳಿಹೇಳಲಾರರು. ಕನಸು ಮತ್ತು ದರ್ಶನಗಳು ಯಾವಾಗಲೂ ದೇವರಿಂದ ಬಂದವುಗಳಲ್ಲ. ಅವು ಅನೇಕ ಸಾರಿ ನೀವು ಯೋಚಿಸಿದ್ದರಿಂದ ಮತ್ತು ಸಣ್ಣ ಮೆದುಳಿನ ಕಾರ್ಯದಿಂದ ಬರುವವು. ಕೆಲವು ಸಾರಿ ಕೆಲವು ಸಂಗತಿಗಳನ್ನು ಮಾಡಲು ಇದು ದೇವರ ಇಷ್ಟವೇ ಎಂದು ತಿಳಿದು ಬರುವುದು. ಅದೇ ಸಮಯದಲ್ಲಿ ಅದನ್ನು ಮಾಡಲು ನಿಮ್ಮ ಸ್ವಂತ ಆಶೆಯೂ ಇರಬಹುದು. ಹಾಗಾದರೆ ದೇವರ ಸ್ವರವನ್ನು ಕೇಳುವುದು ಹೇಗೆ?

ಸತ್ಯವೇದದಲ್ಲಿ ನಿಮಗಾಗಿ ದೇವರ ಸಂದೇಶ ಬರೆದಿದ್ದಕ್ಕಾಗಿ ಆತನನ್ನು ಸ್ತುತಿಸಿ. ಸತ್ಯವೇದದಲ್ಲಿ ದೇವರು ಹೇಳುವ ವಿಷಯದೊಂದಿಗೆ ನೀವು ಪ್ರತಿಯೊಂದು ವಿಷಯವನ್ನು ಪರಿಶೋಧಿಸಬೇಕು. ಅದಕ್ಕಾಗಿಯೇ ನೀವು ಈಗ ಅಭ್ಯಾಸಿಸುವಂತೆ ದೇವರ ವಾಕ್ಯವನ್ನು ಅಭ್ಯಾಸಿಸುವುದು ಪ್ರಾಮುಖ್ಯವಾಗಿದೆ. ಈ ಪ್ರಾಥಮಿಕ ಅಭ್ಯಾಸಗಳ ಮೂಲಕ ನೀವು ಸತ್ಯವೇದವನ್ನು ಉತ್ತಮವಾಗಿ

ತಿಳಿದುಕೊಳ್ಳುವಿರಿ. ನೀವು ಇದರ ಬೋಧನೆಗಳನ್ನು ಯಾವ ರೀತಿಯಲ್ಲಿ ಪ್ರಾಯೋಗಿಕವಾಗಿ ನಿಮ್ಮ ಜೀವಿತದಲ್ಲಿ ಅಳವಡಿಸಬಹುದೆಂದು ಕಲಿಯುವಿರಿ.

ಕೀರ್ತನೆಗಳು 119:18,89,105,130,160. ನನ್ನ ಕಣ್ಣು ತೆರೆ, ಆಗ ನಿನ್ನ ಧರ್ಮಶಾಸ್ತ್ರದ ಅದ್ಭುತಗಳನ್ನು ಕಂಡುಕೊಳ್ಳುವೆನು. ಯೆಹೋವನೇ, ನಿನ್ನ ವಾಕ್ಯವು ಪರಲೋಕದಲ್ಲಿ ಶಾಶ್ವತವಾಗಿ ಸ್ಥಾಪಿಸಲ್ಪಟ್ಟಿದೆ. ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ. ನಿನ್ನ ವಾಕ್ಯ ವಿವರಣೆಯಿಂದ ಯುಕ್ತಿಹೀನರಿಗೆ ಜ್ಞಾನೋದಯವಾಗುವುದು. ನಿನ್ನ ವಾಕ್ಯದ ಸಾರಾಂಶವು ಸತ್ಯವೇ; ನಿನ್ನ ನೀತಿ ವಿಧಿಗಳೆಲ್ಲಾ ಯುಗ ಯುಗಕ್ಕೂ ಇರುವವು.

### ನೀವು ಮಾಡಬೇಕಾದದ್ದು

14. ನಿಮಗಾಗಿ ದೇವರ ಸಂದೇಶವೇನೆಂದು ತಿಳಿದುಕೊಳ್ಳುವ ದೇವರ ನಿಜ ಮಾರ್ಗವು

...ಅ) ಸತ್ಯವೇದದಲ್ಲಿ ದೇವರು ಏನು ಹೇಳುವೆನೆಂದು ಅಭ್ಯಾಸ ಮಾಡುವುದರಿಂದ

...ಆ) ನಿಮ್ಮ ಸ್ನೇಹಿತರ ಹಿತನುಡಿಗಳನ್ನು ಕೇಳುವುದರಿಂದ

...ಇ) ನೀವು ಮಾಡುವುದರ ಕುರಿತು ನಿಮ್ಮಲ್ಲಿರುವ ಭಾವನೆಗಳಿಂದ

**ಉತ್ತರ:** 14ಅ) ಸತ್ಯವೇದದಲ್ಲಿ ದೇವರು ಏನು ಹೇಳುವನೆಂದು ಅಭ್ಯಾಸ ಮಾಡುವುದರಿಂದ



## ದೇವರ ಪುಸ್ತಕವನ್ನು ಬರೆದದ್ದು ಹೇಗೆ

ಬೇರೆಬೇರೆ ಕಾಲಗಳಲ್ಲಿ ದೇವರು ತನ್ನ ಸಂದೇಶವನ್ನು ಬರೆಯಲು ಕೆಲವು ಪ್ರತ್ಯೇಕ ವ್ಯಕ್ತಿಗಳನ್ನು ಆರಿಸಿಕೊಂಡನು. ಪವಿತ್ರಾತ್ಮನು ಅವರನ್ನು ಪ್ರತೀಕ್ಷಿಸಿದನು ಮತ್ತು ಬರೆಯಬೇಕಾದುದ್ದನ್ನು ತಿಳಿಸಿದನು. ಪವಿತ್ರ ಶಾಸ್ತ್ರಗಳೆಂದು ಕರೆಯಲ್ಪ

ಡುವವುಗಳಲ್ಲಿ ದೇವರು ತನ್ನ ಸಂದೇಶಗಳನ್ನು ಅರವತ್ತಾರು ಪುಸ್ತಕಗಳಲ್ಲಿ ಬರೆಯಲು ಸುಮಾರು 1600 ವರ್ಷಗಳ ಅವಧಿಯಲ್ಲಿ, ಇಂತಹ ನಾಲ್ವತ್ತು ಜನರನ್ನು ಉಪಯೋಗಿಸಿದನು. ಇವು ದೇವರಿಂದಲೇ - ಅಂದರೆ ಒಬ್ಬ ಲೇಖಕನಿಂದಲೇ ಬಂದವುಗಳು ಎಂದು ತೋರಿಬರಲು ಅವುಗಳಲ್ಲಿ ಪರಿಪೂರ್ಣತೆ, ಒಂದುತನ ಮತ್ತು ಉದ್ದೇಶಗಳು ಕಾರಣವಾಗಿವೆ.

### ನೀವು ಮಾಡಬೇಕಾದದ್ದು

15. (ಎರಡನ್ನು ಬರೆಯಿರಿ) ಸತ್ಯವೇದಗಳನ್ನು ಬರೆದ ವ್ಯಕ್ತಿಗಳು
    ...ಅ) ಆರಿಸಲ್ಪಟ್ಟ ವ್ಯಕ್ತಿಗಳಾಗಿದ್ದರು
    ...ಆ) ಬರೆಯಲು ಅರಸನಿಂದ ವೇತನ ಸಿಕ್ಕುತ್ತಿತ್ತು
    ...ಇ) ಪವಿತ್ರಾತ್ಮನಿಂದ ಪ್ರೇರಿತರಾಗಿದ್ದರು
    ...ಈ)ಅನೇಕ ತಪ್ಪುಗಳನ್ನು ಮಾಡಿದರು

**ಉತ್ತರಗಳು** : 15ಅ) ಆರಿಸಲ್ಪಟ್ಟ ವ್ಯಕ್ತಿಗಳಾಗಿದ್ದರು ಇ) ಪವಿತ್ರಾತ್ಮನಿಂದ ಪ್ರೇರಿತರಾಗಿದ್ದರು.

ಅನೇಕ ವರ್ಷಗಳ ಹಿಂದೆ ದೇವರು ತನ್ನ ಮಕ್ಕಳನ್ನು ಆರಿಸಿಕೊಂಡು ಅರವತ್ತಾರು ಪುಸ್ತಕಗಳನ್ನು ಒಂದೇ ಪುಸ್ತಕ ರೂಪದಲ್ಲಿ ಮಾಡಿದನು. ಅದುವೇ ಸತ್ಯವೇದವು, ಸತ್ಯವೇದವೆಂದರೆ ದೇವರ ಪುಸ್ತಕಗಳು. ಮೊದಲಿನ ಮೂವತ್ತೊಂಬತ್ತು ಪುಸ್ತಕಗಳು ಕರ್ತನಾದ ಯೇಸು ಹುಟ್ಟುವ ಪೂರ್ವದಲ್ಲಿಯೇ ಬರೆಯಲ್ಪಟ್ಟವು. ಅವುಗಳಿಗೆ ಹಳೇ ಒಡಂಬಡಿಕೆ ಎಂದು ಹೆಸರು. ಸತ್ಯವೇದದ ಎರಡನೇ ಭಾಗಕ್ಕೆ ಹೊಸ ಒಡಂಬಡಿಕೆ ಎಂದು ಕರೆಯುತ್ತಾರೆ. ಇದರಲ್ಲಿ ಯೇಸು ಭೂಮಿಗೆ ಬಂದ ನಂತರದ ಮತ್ತು ದೇವರ ಮತ್ತು ಮನುಷ್ಯರೊಂದಿಗಾದ ಹೊಸ ಒಪ್ಪಂದದ ಕುರಿತು ಉಂಟು; ಇದರಲ್ಲಿ ಇಪ್ಪತ್ತೇಳು ಪುಸ್ತಕಗಳಿವೆ. ಅವು ನಮಗೆ ಈ ಒಡಂಬಡಿಕೆಯ ಕರಾರುಗಳನ್ನು ಕೊಡುತ್ತವೆ.

### ನೀವು ಮಾಡಬೇಕಾದದ್ದು

16. ಸತ್ಯವೇದವು ಎರಡು ಭಾಗಗಳನ್ನು ಒಳಗೊಂಡಿವೆ. ಅವುಗಳ ಹೆಸರು

...ಅ) ಹಳೆ ಒಡಂಬಡಿಕೆ ಮತ್ತು ಪ್ರಕಟಣೆ

...ಆ) ಹಳೆ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ

...ಇ) ಕಾನೂನು ಮತ್ತು ಪ್ರವಾದಿಗಳು

17. ಸತ್ಯವೇದದಲ್ಲಿ ಎಷ್ಟು ಪುಸ್ತಕಗಳಿವೆ?

...ಅ) ಹಳೆ ಒಡಂಬಡಿಕೆಯಲ್ಲಿ 39 ಮತ್ತು ಹೊಸ ಒಡಂಬಡಿಕೆಯಲ್ಲಿ 27

...ಆ) ಹಳೆ ಒಡಂಬಡಿಕೆಯಲ್ಲಿ 27 ಮತ್ತು ಹೊಸ ಒಡಂಬಡಿಕೆಯಲ್ಲಿ 39.

**ಉತ್ತರಗಳು** : 16ಆ) ಹಳೆ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ 17ಅ) ಹಳೆ ಒಡಂಬಡಿಕೆಯಲ್ಲಿ 39 ಮತ್ತು ಹೊಸ ಒಡಂಬಡಿಕೆಯಲ್ಲಿ 27.

ಮೊದಲು ಹಳೆ ಒಡಂಬಡಿಕೆಯು ಹಿಬ್ರು ಭಾಷೆಯಲ್ಲಿಯೂ ಮತ್ತು ಹೊಸ ಒಡಂಬಡಿಕೆಯೂ ಗ್ರೀಕ್ ಭಾಷೆಯಲ್ಲಿಯೂ ಬರೆಯಲ್ಪಟ್ಟಿದ್ದವು. ದೇವರು ತನ್ನ ಪುಸ್ತಕವನ್ನು ಎಲ್ಲಾ ಮಾನವ ಕುಲಕ್ಕೆ ಕೊಟ್ಟು, ಅವರು ಅದನ್ನು ಓದಬೇಕೆನ್ನುತ್ತಾನೆ. ಆದುದರಿಂದ ಆತನು ಅದನ್ನು ಅನೇಕ ಭಾಷೆಗಳಲ್ಲಿ ಭಾಷಾಂತರ ಮಾಡಲು ತನ್ನ ಮಕ್ಕಳಿಗೆ ಸಹಾಯ ಮಾಡಿದ್ದಾನೆ. ಈಗ ಸತ್ಯವೇದದ ಭಾಗ ಗಳು 1300 ಭಾಷೆಗಳಲ್ಲಿ ಸಿಕ್ಕುತ್ತದೆ.

## ನೀವು ಮಾಡಬೇಕಾದದ್ದು

18. ಪ್ರಾರಂಭದಲ್ಲಿ ಸತ್ಯವೇದವನ್ನು ಬರೆದದ್ದು

...ಅ) ಹಿಬ್ರು ಮತ್ತು ಲ್ಯಾಟಿನ್ ಭಾಷೆಯಲ್ಲಿ

...ಆ) ಸ್ಪಾನಿಷ್ ಮತ್ತು ಗ್ರೀಕ್ ಭಾಷೆಯಲ್ಲಿ

...ಇ) ಫ್ರೆಂಚ್ ಮತ್ತು ಇಂಗ್ಲೀಷ್‌ನಲ್ಲಿ

...ಈ)ಹಿಬ್ರು ಮತ್ತು ಗ್ರೀಕ್ ಭಾಷೆಯಲ್ಲಿ

19. ಸತ್ಯವೇದವು

...ಅ) ಪ್ರತಿಯೊಬ್ಬರಿಗೂ ಬೇಕಾದ ಪುಸ್ತಕ

...ಆ) ಕೇವಲ ವಿದ್ಯಾವಂತರಿಗೆ

...ಇ) ಸೇವಕರಿಗೆ ಮಾತ್ರ ಬೇರೆ ಯಾರಿಗೂ ಇಲ್ಲ

**ಉತ್ತರಗಳು**: 18ಈ) ಹಿಬ್ರು ಮತ್ತು ಗ್ರೀಕ್ ಭಾಷೆಯಲ್ಲಿ 19ಅ) ಪ್ರತಿಯೊಬ್ಬರಿಗೂ ಬೇಕಾದ ಪುಸ್ತಕ.

ಕೆಲವು ಭಾಷೆಗಳಲ್ಲಿ ಸತ್ಯವೇದದ ಬೇರೆ ಬೇರೆ ಭಾಷಾಂತರಗಳಿವೆ. ಆದರೆ, ಅವೆಲ್ಲವೂ ಒಂದೇ ವಿಷಯವನ್ನು ಹೇಳುತ್ತವೆ.

ಈ ಪಾಠದಲ್ಲಿರುವ ಉಲ್ಲೇಖನಗಳನ್ನು ಸತ್ಯವೇದದಿಂದ ತೆಗೆದುಕೊಳ್ಳಲಾಗಿದೆ.

## ನೀವು ಮಾಡಬೇಕಾದದ್ದು

20. ಈ ಪಾಠದಲ್ಲಿರುವ ಉಲ್ಲೇಖಗಳನ್ನು ಆರಿಸಿಕೊಂಡಿದ್ದು

...ಅ) ಸಜೀವ ವಾಕ್ಯದಿಂದ

...ಆ) ಸತ್ಯವೇದದಿಂದ

ಉತ್ತರ : 20ಆ) ಸತ್ಯವೇದದಿಂದ

## ಸತ್ಯವೇದ ಸಂಬಂಧ ಸೂಚನೆಗಳು

ಸತ್ಯವೇದದ ಪ್ರತಿ ಪುಸ್ತಕವು ಅಧ್ಯಾಯಗಳೋಪಾದಿಯಲ್ಲಿ ವಿಭಾಗಿಸಲ್ಪಟ್ಟಿದೆ. ಅಧ್ಯಾಯಗಳು ಪರಿಚ್ಛೇದಗಳಲ್ಲಿ ವಿಭಾಗಿಸಲ್ಪಟ್ಟಿವೆ ಮತ್ತು ಪರಿಚ್ಛೇದಗಳು ವಚನಗಳನ್ನು ಒಳಗೊಂಡಿವೆ. ವಚನಗಳು ಸಂಖ್ಯೆಯಲ್ಲಿರುವುದರಿಂದ ಅದು ಸತ್ಯವೇದದಲ್ಲಿ ಎಲ್ಲಿ ಸಿಕ್ಕುತ್ತದೆ ಎಂದು ತಿಳಿಸುವುದು. ನೀವು ಸತ್ಯವೇದದ ನಿರ್ದಿಷ್ಟ ಭಾಗದ ಒಂದು ಟಿಪ್ಪಣಿಯನ್ನು ಮಾಡಬೇಕಿದ್ದರೆ ಮೊದಲು ಪುಸ್ತಕದ ಹೆಸರು, ನಂತರ ಅಧ್ಯಾಯ, ಅದರ ಮುಂದೆ ಅಪೂರ್ಣ ವಿರಾಮ ಚಿಹ್ನೆ (:) ಹಾಕಿ ವಚನದ ಸಂಖ್ಯೆಯನ್ನು ಬರೆಯಬೇಕು ಯೋಹಾನ 3:16 ಅಂದರೆ ಯೋಹಾನನ ಪುಸ್ತಕ, 3ನೇ ಅಧ್ಯಾಯ ಮತ್ತು 16ನೇ ವಚನ ಎಂದು.

ಕ್ರಮಾನುಗತವಲ್ಲದ ಎರಡು ಅಥವಾ ಹೆಚ್ಚು ವಚನಗಳನ್ನು ಬರೆದು ಬೇಕಾದಲ್ಲಿ ಅಲ್ಲಿ ವಿರಾಮ ಚಿಹ್ನೆ(,) ಹಾಕಿ ಅವುಗಳನ್ನು ಪ್ರತ್ಯೇಕ ಮಾಡಿರಿ.

ಯೋಹಾನ 3:16,17,20 ಎಂದರೆ ಯೋಹಾನ ಅಧ್ಯಾಯ 3 ವಚನಗಳು 16,17 ಮತ್ತು 20 ಎಂದು. ಇದು ಸತ್ಯವೇದದ ಸಂಬಂಧ ಸೂಚನೆಯು

ವಚನಗಳ ಮಧ್ಯೆ ಸಂಯೋಗ ಚಿಹ್ನೆ (-)ಯನ್ನು ಹಾಕಿದರೆ ಅದು ಆ ಎಲ್ಲ ವಚನಗಳನ್ನು ಒಳಗೊಂಡಿದೆ ಎಂದರ್ಥ ಯೋಹಾನ 3:16-22 ಎಂದರೆ, ಯೋಹಾನ ಅಧ್ಯಾಯ 3, ವಚನಗಳು 16 ರಿಂದ 22ರವರೆಗೆ.

ಯಾವಾಗ ಎರಡು ಅನುಕ್ರಗಳನ್ನು ಬಿಟ್ಟು ಬೇರೆ ವಚನವಿದ್ದಲ್ಲಿ ಅವುಗಳನ್ನು ಅಲ್ಲಿ ವಿರಾಮ ಚಿಹ್ನೆ (,)ಯಿಂದ ಪ್ರತ್ಯೇಕಮಾಡಿರಿ. ಯೋಹಾನ 3:16,22,23 ಅಂದರೆ ಯೋಹಾನ ಅಧ್ಯಾಯ 3 ವಚನಗಳು 16,22 ಮತ್ತು 23

ನೀವು ಬೇರೆ ಬೇರೆ ಅಧ್ಯಾಯಗಳಲ್ಲಿನ ವಚನಗಳನ್ನು ಸೂಚಿಸುವಾಗ ಸಂಬಂಧ ಸೂಚನೆಗಳನ್ನು, ಅರ್ಧ ವಿರಾಮ ಚಿಹ್ನೆ (;)ಯಿಂದ ಪ್ರತ್ಯೇಕಿಸಿರಿ. ಯೋಹಾನ 3:16;6:24 ಅಂದರೆ ಯೋಹಾನನ ಅಧ್ಯಾಯ 3 ವಚನ 16; ಮತ್ತು ಯೋಹಾನನ ಅಧ್ಯಾಯ 6 ವಚನ 24.

## ದೇವರ ಸ್ವರವನ್ನು ಕೇಳುವುದು ಹೇಗೆ?

ರೇಡಿಯೋ ಕೇಳುವ ಮೊದಲು ನೀವು ಅದರ ಮುಖ ಫಲಕವನ್ನು (Dial) ಸರಿಯಾದ ಧ್ವನಿಗೆ ಹೊಂದಿಸಿ ಇಡಬೇಕು. ಹಾಗಾದರೆ ದೇವರ ಸ್ವರವನ್ನು ಕೇಳಲು ನಿಮ್ಮ ಆತ್ಮೀಕ ಫಲಕವನ್ನು ಹೇಗೆ ಧ್ವನಿಗೆ ಹೊಂದಿಸಿ ಇಡಬೇಕು? ಹೀಗೆ ಮಾಡಲು ಇಲ್ಲಿ ಕೆಲವು ವಿಧಗಳುಂಟು.

ಸತ್ಯವೇದವನ್ನು ದಿನಾಲೂ ಓದಿರಿ

★ ಸತ್ಯವೇದದಲ್ಲಿ ಓದಿದ ಭಾಗವನ್ನು ಯೋಚಿಸುತ್ತಾ ಇರ್ರಿ. ಓದಿದ ವಚನವನ್ನು ಧ್ಯಾನಿಸಿರಿ.

★ ನೀವು ಇಷ್ಟಪಡುವ ಸತ್ಯವೇದದ ವಚನಗಳನ್ನು ತಿರಿಗಿ ಓದಿರಿ ಮತ್ತು ಬಾಯಿ ಪಾಠ ಮಾಡಿರಿ.

★ 2 ತಿಮೊಥೆ 3:16,17 ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಡಿಗೂ ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ. ಆದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ದನಾಗುವನು.

ನೀವು ಮೊದಲನೆಯ ಸಾರೆ ಸತ್ಯವೇದವನ್ನು ಓದಲು ಪ್ರಾರಂಭ ಮಾಡಿರುವುದಾದರೆ, ಹೊಸ ಒಡಂಬಡಿಕೆಯಿಂದ ಓದಲು ಆರಂಭಿಸಿರಿ.

ದೇವರು ನಿಮ್ಮೊಂದಿಗೆ ಯೇಸುವಿನ ಜೀವನ ಮತ್ತು ಬೋಧನೆಗಳ ಮುಖಾಂತರ ಮಾತಾಡುವನು. ನೀವು ಹಳೆ ಒಡಂಬಡಿಕೆಯನ್ನು ಓದುವ ಮೊದಲು ಕರ್ತನು ನಮ್ಮೊಂದಿಗೆ ಮಾಡಿಕೊಂಡ ಹೊಸ ಒಪ್ಪಂದದ ಕುರಿತು ಹೆಚ್ಚಾಗಿ ಕಲಿಯುವಿರಿ.

ಇಬ್ರಿಯರಿಗೆ 1:1,2 ಪುರಾತನ ಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗಭಾಗವಾಗಿಯೂ ವಿಧವಿಧವಾಗಿಯೂ ಮಾತಾಡಿದ ದೇವರು ಈ ಅಂತ್ಯ ದಿನಗಳಲ್ಲಿ ನಿಮ್ಮ ಸಂಗಡ ಮಗನ ಮುಖಾಂತರ ಮಾತಾಡಿದ್ದಾನೆ. ಈತನನ್ನು ಎಲ್ಲಕ್ಕೂ ಭಾಧ್ಯನನ್ನಾಗಿ ನೇಮಿಸಿದನು. ಈತನ ಮೂಲಕವೇ ಜಗತ್ತನ್ನು ಉಂಟುಮಾಡಿದನು.

★ ದೇವರಿಂದ ಕೇಳುವೆನೆಂಬ ನಿರೀಕ್ಷೆಯೊಡನೆ ಸಭೆಗೆ ಹೋಗಿರಿ

★ ದಿನಾಲೂ ಪ್ರಾರ್ಥಿಸಿರಿ ದೇವರು ನಿಮ್ಮೊಂದಿಗೆ ಮಾತಾಡಲು ಬೇಡಿಕೊಳ್ಳಿರಿ

★ ನೀವು ಪ್ರಾರ್ಥಿಸುವಾಗ ಹೊರಗಿನ ವಿಷಯಗಳಿಗೆ ಬಾಹಿರವಾಗಿ ಅಂತರ್ಧ್ಯಾನರಾಗಲು ಕಣ್ಣುಗಳನ್ನು ಮುಚ್ಚಬಹುದು ಯಾವಾಗಲೂ ದೇವರೊಡನೆ ಮಾತಾಡಲು ಆತುರರಾಗಿರಿ. ಆತನು ನಿಮ್ಮ ಹೃದಯದೊಂದಿಗೆ ಮಾತಾಡಲು ಶಾಂತತೆಯಿಂದ ಕಾದುಕೊಳ್ಳಿರಿ.

★ ಸುವಾರ್ತ ಸಂಗೀತಗಳನ್ನು ಹಾಡಿರಿ ಮತ್ತು ಅವುಗಳ ಕುರಿತು ಆಲೋಚಿಸಿರಿ.

★ ನಿಮ್ಮ ಸುತ್ತಲೂ ಕಂಡುಬರುವ ದೇವರ ಒಳ್ಳೇತನ, ಶಕ್ತಿ ಮತ್ತು ಪ್ರೀತಿಯನ್ನು ವೀಕ್ಷಿಸುವ ಅಭ್ಯಾಸ ಮಾಡಿರಿ.

★ ನಿಮಗೆ ಸಮಯ ಸಿಕ್ಕಿದಾಗ ಸುವಾರ್ತಾ ಸಾಹಿತ್ಯಗಳನ್ನು ಓದಿರಿ ಮತ್ತು ಸುವಾರ್ತಾ ಪ್ರಸಾರಗಳನ್ನು ಕೇಳಿರಿ

★ ಇತರ ಶಿಷ್ಯರೊಂದಿಗೆ ದೇವರ ಮತ್ತು ಆತನ ವಾಕ್ಯದ ಕುರಿತು ಮಾತಾಡಿರಿ

★ ದೇವರು ಹೇಳಿದ್ದನ್ನು ಮಾಡಿರಿ, ಆತನ ನಡೆಸುವಿಕೆಗಾಗಿ ಕೇಳಿಕೊಂಡಾಗ ಅದರಂತೆ ನಡೆಯುವುದು ನಿಮ್ಮ ಕರ್ತವ್ಯವೆಂದು ನೆನಪಿನಲ್ಲಿಡಿರಿ.

★ ಪ್ರಾಮಾಣಿಕವಾಗಿ ಈ ಪಾಠಗಳನ್ನು ಮತ್ತು ಇತರ ಸತ್ಯವೇದದ ಅಭ್ಯಾಸಗಳನ್ನು ಮಾಡಿರಿ, ಮತ್ತು ದೇವರು ಅವುಗಳ ಮುಖಾಂತರ ನಿಮ್ಮೊಂದಿಗೆ ಮಾತಾಡಲು ಕೇಳಿಕೊಳ್ಳಿರಿ.

### ನೀವು ಮಾಡಬೇಕಾದದ್ದು

21. ದೇವರ ಸ್ವರವನ್ನು ಕೇಳಲು ನೀವು ಮಾಡಬೇಕಾದ ಸಂಗತಿಗಳ ಕುರಿತು ತಿರಿಗೊಮ್ಮೆ ನೋಡಿರಿ. ಈಗಾಗಲೇ ನೀವು ಮಾಡುವವುಗಳ ಮುಂದೆ ಈ ಗುರ್ತು ಹಾಕಿರಿ. ನೀವು ದಿನಾಲೂ ಮಾಡದಿರುವವುಗಳಿಗಾಗಿ ಅಥವಾ ಇನ್ನೂ ಮಾಡದಿರುವವುಗಳಿಗಾಗಿ ಪ್ರಾರ್ಥಿಸಿರಿ. ನೀವು ಪ್ರಾರಂಭ ಮಾಡಬೇಕೆಂದಿರುವವುಗಳ ಕೆಳಗೆ ಗೆರೆ ಎಳೆಯಿರಿ.

**ಪಾಠ 4**

# ನೀವು ಬೆಳೆಯಲು ಬಯಸಿದ್ದೀರೋ



**ಈ ಪಾಠದಲ್ಲಿ ನೀವು ಕಲಿಯುವ ಅಂಶಗಳು:**

ಪ್ರತಿದಿನ ನಿಮ್ಮ ಆತ್ಮವನ್ನು ಪೋಷಿಸಿರಿ

ಕರ್ತನಲ್ಲಿ ವಿಶ್ರಮಿಸಿರಿ

ಕಾಯಿಲೆಗಳನ್ನು ದೂರವಿಡಿರಿ; ಸ್ವಚ್ಛವಾಗಿಡಿರಿ

ಕಾಯಿಲೆಗಳನ್ನು ದೂರವಿಡಿರಿ; ವಿಷವನ್ನು ತೆಗೆದುಕೊಳ್ಳಬೇಡಿ

ಆತ್ಮೀಕ ವ್ಯಾಯಾಮ